ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ11-08-2026 ರಂದು ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನನ್ನ ಮನೆಯಿಂದ ದೂರುದಾರರ ಮನೆಗೆ 3 ಕಿ.ಮೀ ಅಂತರ ಇರುತ್ತದೆ . ಆರೋಪಿ ಮನೆಯಿಂದ ನನ್ನ ಮನೆಗೆ 1 ಕಿ.ಮೀ ಅಂತರ ಇರುತ್ತದೆ. ನನ್ನ ಗ್ರಾಮ, ಆರೋಪಿಯ ಗ್ರಾಮ ಹಾಗೂ ದೂರುದಾರರ ಗ್ರಾಮ ಬೇರೆ ಬೇರೆ ಇರುತ್ತದೆ ಎಂದರೆ ಸರಿ. ನಿಮ್ಮ ಸಮಕ್ಷಮ ಪಂಚಾಯಿತಿ ಆಗಿರುತ್ತದೆ ಎಂದು ನೀವು ಹೇಳಿದ್ದು, ನೀವು, ದೂರುದಾರರು ಹಾಗೂ ಆರೋಪಿಯನ್ನು ಹೊರತುಪಡಿಸಿ ಬೇರೆ ಯಾರು ಯಾರು ಇದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾವು ಮೂರು ಜನ ಮಾತ್ರ ಇದ್ದೆವು ಎಂದು ನುಡಿಯುತ್ತಾರೆ.

ಪಂಚಾಯಿತಿ ಆದ ದಿನ ಏನಾದರೂ ಬರವಣಿಗೆ ಆಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಮಂಜುನಾಥ ರವರ ಹೇಳಿಕೆಯ ಮೇರೆಗೆ ಚೆಕ್ ನ್ನು ನಾನು ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಬರೆದ ಚೆಕ್‌ನ್ನು ಯಾರು ತೆಗೆದುಕೊಂಡು ಬಂದಿದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ಮಂಜುನಾಥ ರವರೇ ತೆಗೆದುಕೊಂಡು ಬಂದಿದ್ದರು ಎಂದು ನುಡಿಯುತ್ತಾರೆ. ಚೆಕ್ಕಿನಲ್ಲಿರುವ ತಾರೀಖನ್ನು ನೀವೇ ಬರೆದಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಮಂಜುನಾಥ ರವರು ಒಂದು ಚೆಕ್ಕಿನ ಮೇಲೆ ದಿಃ 05-08-2020 ಎಂದು ಬರೆಯಲು ಹೇಳಿದ್ದು, ಮತ್ತೊಂದು ಚೆಕ್ಕಿನ ಮೇಲೆ ದಿಃ 13-08-2020 ಎಂದು ಬರೆಯಲು ಹೇಳಿದ್ದು, ಮತ್ತೊಂದು ಚಕ್ಕಿನ ಮೇಲೆ ದಿಃ 18-08-2020 ಎಂದು ಬರೆಯಲು ಹೇಳಿದ್ದು ನಾನು ಅವರು ಹೇಳಿದಂತೆ ಮೇಲೆ ಹೇಳಿದ ತಾರೀಖನ್ನು ಬರೆದಿರುತ್ತೇನೆ.

ಮೇಲೆ ಹೇಳಿದ ಮೂರು ಚಕ್ಕನ್ನು ನಾನು ಹೇಳಿದ ನಂತರ ಆರೋಪಿ ಚಕ್ಕುಗಳ ಮೇಲೆ ಸಹಿ ಮಾಡಿರುತ್ತಾರೆ.

ಆ ದಿನ ನಾನು, ಆರೋಪಿ ಹಾಗೂ ದೂರುದಾರರು ಎಲ್ಲಿಯೂ ಸೇರಿರುವುದಿಲ್ಲ ಎಂದರೆ ಸರಿಯಲ್ಲ. ದೂರು ದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಗೆ ವಿಶೇಷವಾಗಿ ನಿಮ್ಮ ಪರಿಚಯ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**( ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಸಾ.ಓ.ಹೇ.ಸ.ಒ**

ಸಹಿ ಇದೆ/-

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ**
ಸಿದ್ದಾಪುರ